

## ಸಂರಕ್ಷಕರನ್ನೇ ತೆರವುಗೊಳಿಸುವುದು ನ್ಯಾಯವೇ?



ಪಶ್ಚಿಮ ಘಟ್ಟ ಸಂರಕ್ಷಣೆಯ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವ ಮುನ್ನ ಕೆಲವು ಪೂರ್ವತಯಾರಿಗಳನ್ನು ಮಾಡಿಕೊಳ್ಳಬೇಕಾಗಿದೆ. ಅರಣ್ಯ ಇಲಾಖೆ, ಕಂದಾಯ ಇಲಾಖೆ ಮತ್ತು ಭೂದಾಖಲೆಗಳ ಇಲಾಖೆ ವತಿಯಿಂದ ಸಮೀಕ್ಷೆ ನಡೆಸಿ, ಅರಣ್ಯ ಮತ್ತು ಗ್ರಾಮಗಳ ಗಡಿ ಗುರುತು ಹಾಕಬೇಕು. ಅರಣ್ಯದ ರಕ್ಷಣೆಯು, ಇಂತಹ ವರದಿಗಳನ್ನು ಅನುಷ್ಠಾನ ಮಾಡುವ ಮೂಲಕವೇ ಆಗಬೇಕಿಲ್ಲ. ಅರಣ್ಯ ಉಳಿಸಬೇಕು ಎಂಬುದು ಎಲ್ಲರ ಸಾಮಾನ್ಯ ಜ್ಞಾನಕ್ಕೆ ಹೊಳೆಯುವ ವಿಚಾರವಾಗಿದೆ. ಸೋಲಿಗರು, ಜೇನುಕುರುಬರು, ಎರವರು, ಕುಡಿಯರು, ಬೆಟ್ಟಕುರುಬರು... ಹೀಗೆ ಅನೇಕ ಸಮುದಾಯಗಳು ಕಾಡಿನಲ್ಲೇ ಇದ್ದುಕೊಂಡು, ಅರಣ್ಯ ರಕ್ಷಣೆಯಲ್ಲಿ ನಿರತವಾಗಿವೆ. ಅವರನ್ನೆಲ್ಲ ಅಲ್ಲಿಂದ ತೆರವು ಮಾಡುವುದು ಸರಿಯೇ?

ಪಶ್ಚಿಮ ಘಟ್ಟದ ಹೊರತಾಗಿ ನಮ್ಮ ರಾಜ್ಯದಲ್ಲಿರುವ ಇತರ ಕಾಡುಗಳ ಸಂರಕ್ಷಣೆಯೂ ಆಗಬೇಕು. ಬಳ್ಳಾರಿಯಲ್ಲಿರುವ ಹಸಿರು ಪ್ರದೇಶ, ಕರಾವಳಿ ಜಿಲ್ಲೆಗಳಲ್ಲಿ ಇರುವ ಹಸಿರನ್ನೂ ಸಂರಕ್ಷಿಸಬೇಕು. ಆದ್ದರಿಂದ ಹಸಿರಿನ ಸಂರಕ್ಷಣೆ ಎನ್ನುವುದು ಸಮಗ್ರ ಪ್ರಯತ್ನದಿಂದ ಸಾಧ್ಯವೇ ಹೊರತು ಯಾವುದೋ ಒಂದು ವರದಿಯನ್ನು ಅನುಷ್ಠಾನ ಮಾಡುವುದರಿಂದಷ್ಟೇ ಸಾಧ್ಯವಿಲ್ಲ. ಗ್ರಾಮ ಅರಣ್ಯೀಕರಣ ಪ್ರಕ್ರಿಯೆ, ದೇವಸ್ಥಾನಗಳು, ಶಾಲೆಗಳು, ಸಂಸ್ಥೆಗಳು ಎಲ್ಲವೂ ಸೇರಿ ಹಸಿರನ್ನು ಬೆಳೆಸುವ ಪ್ರಯತ್ನ ಮಾಡಬೇಕಾಗಿದೆ.

**-ರವಿ ಕುಶಾಲಪ್ಪ**

ಪಶ್ಚಿಮ ಘಟ್ಟ ಕಾರ್ಯಪಡೆ ಅಧ್ಯಕ್ಷ

ಹಬ್ಬಿದಾ ಮಲೆ ಮಧ್ಯದೊಳಗೆ ಎನ್ನುವ ಗೋವಿನ ಹಾಡಿನ ಬಣ್ಣನೆಯನ್ನು ನೆನಪಿಸುವ ದಟ್ಟ ಕಾಡು, ತೊರೆಗಳ ಈ ಘಟ್ಟ ಪ್ರದೇಶ ಮಹಾರಾಷ್ಟ್ರದಲ್ಲಿದೆ.



ಶರಾವತಿ ಕಣಿವೆಯ ವಿಹಂಗಮ ನೋಟ

ಹೇಳುವಂತಿಲ್ಲ. ಕಾಫಿ ಗಿಡಗಳೋ ಸೂರ್ಯನ ಮರಿಗಳನ್ನು ಮುಡಿದುಕೊಂಡಂತೆ ಸುಂದರವಾಗಿ ಹೂ ಬಿಡುವ ಕಾಲವೂ ಬದಲಾಗಿದೆ. ಅಥವಾ ಎಷ್ಟೋ ಗಿಡಗಳು ಹೂ ಬಿಡುವುದನ್ನು ಮರೆತು ತಬ್ಬಿಬ್ಬಾಗಿ ನಿಂತಿವೆ. ಈ ಎಲ್ಲ ಬದಲಾವಣೆಗಳಿಗೆ ಕಾರಣಗಳೇನು ಎಂಬುದನ್ನು ಹುಡುಕಿದ್ದೂ ಆಗಿದೆ. ತಾಪಮಾನ ಏರಿಕೆಯ ಪರಿಣಾಮಗಳಿವು ಎಂಬುದನ್ನು ಒಪ್ಪುವುದಕ್ಕೆ ಈಗ ವಿಜ್ಞಾನಿಗಳ ಸಹಾಯ ಬೇಡ. ಹಸಿರು ಪ್ರದೇಶಗಳ ನಾಶದಿಂದ ಏನೆಲ್ಲ ಅವಘಡಗಳು ನಡೆಯುತ್ತಿವೆ ಎಂಬುದು ಸುಸ್ಪಷ್ಟವಾಗಿ ಗೊತ್ತಾಗುತ್ತಿದೆ. ಹಾಗಾಗಿ ಸದ್ಯಕ್ಕೆ ನಮ್ಮ ಮುಂದಿರುವ ಏಕೈಕ ದಾರಿ, ಭೂಮಿ ಮೇಲಿರುವ ಹಸಿರು ಪ್ರದೇಶವನ್ನು ಸಾಧ್ಯವಾದಷ್ಟೂ ಉಳಿಸಿಕೊಂಡು, ತಾಪಮಾನ ಏರಿಕೆಯ ವೇಗವನ್ನು ಕಡಿಮೆ ಮಾಡುವುದು.

ದಟ್ಟ ಹಸಿರಿನ ಉಡುಗೆ ತೊಟ್ಟ ಪಶ್ಚಿಮ ಘಟ್ಟಗಳು ಇಡೀ ದೇಶದಲ್ಲಿ ಕರ್ನಾಟಕವನ್ನೇ ಹೆಚ್ಚು ಪ್ರೀತಿಸುತ್ತಿರುವಂತೆ, ಇಲ್ಲಿಯೇ ಹೆಚ್ಚು ದೀರ್ಘವಾಗಿ ವ್ಯಾಪಿಸಿಕೊಂಡಿವೆ. ಅಂದರೆ 1600 ಕಿಲೋಮೀಟರ್ ಉದ್ದವಿರುವ ಬೆಟ್ಟಸಾಲುಗಳ ಅರ್ಧಕ್ಕಿಂತಲೂ ಹೆಚ್ಚು ಭಾಗ ಕರ್ನಾಟಕದಲ್ಲಿದೆ. ವಿಶ್ವದ ಅತ್ಯಂತ ಸಕ್ರಿಯವಾದ ಜೀವವೈವಿಧ್ಯವಿರುವ ಸೂಕ್ಷ್ಮ ಪ್ರದೇಶವಿದು ಎಂದು ಯುನೆಸ್ಕೋ ಮನ್ನಣೆ ನೀಡಿದೆ. ಆದರೆ ಇದೀಗ ಕರ್ನಾಟಕ ಮಾತ್ರ, ಈ ಪಶ್ಚಿಮ ಘಟ್ಟವನ್ನು ಸಂರಕ್ಷಿಸಲು ಸಾಧ್ಯವಿಲ್ಲ ಎಂದು ಕೈಚೆಲ್ಲಿರುವಂತಿದೆ.

ಕಸ್ತೂರಿರಂಗನ್ ವರದಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕಳೆದ ಡಿ. 4ರಂದು ಕೇಂದ್ರ ಸರ್ಕಾರ ನಡೆಸಿದ ಘಟ್ಟಪ್ರದೇಶಗಳ ರಾಜ್ಯಗಳ ಸಭೆಯಲ್ಲಿ, ವರದಿಯನ್ನು ಜಾರಿಗೊಳಿಸುವುದಕ್ಕೆ ಕರ್ನಾಟಕ